ಶ್ರೀ ಜೆ.ಬಿ. ಶಂಕರರಾವ್—ಎಲ್ಲೆಲ್ಲಿ ಶಿಕ್ಷಕರ ಭಾಗ ಖಾಲಿ ಇದೆ ಅಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಹ ನಿರ್ದೇಶಕರಿಗೆ ಆದೇಶವಿದೆ. ಆ ರೀತಿ ಕಾರ್ಯಕ್ರಮ ತೆಗೆದು ಕೊಂಡು ಶಿಕ್ಷಕರನ್ನು ಒದಗಿಸಿಕೊಡುತ್ತೇನೆಂದು ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ವಿ.ಎಲ್. ಶಿವಪ್ಪ —ಇದು ಪಾಲಿಸಿ ಮ್ಯಾಟರ್ ಆಯಿತು, ಆ ಉತ್ತರದಿಂದ ಪ್ರಯೋಜನ ವಿಲ್ಲ. ೫೦೦ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಲಾಸ್ ಆಗಿದೆ. ೧೧ ಜನ ಉಪಾಧ್ಯಾಯರು ಇದ್ದಾರೆ. ನಾನು ದೇಶದ ವಿಷಯ ಕೇಳಲಿಲ್ಲ, ನನ್ನ ಕ್ಷೇತ್ರದ ಆ ಒಂದು ಸ್ಕೂಲಿನ ಹೆಣ್ಣು ಮಕ್ಕಳಿಗೆ ಬಹಳ ಅನ್ಯಾಯವಾಗಿದೆ. ೧೧ ಪರ್ಸೆಂಟ್ ಪಾಸ್ ಆಗಿದ್ದಾರೆ, ಒಂದು ಸಬ್ಜೆಕ್ಟ್ ಹೋದರೆ ಜೀವನ ಮಾಡುವು ದಕ್ಕೆ ಕಷ್ಟವಾಗುತ್ತದೆ. ಗ್ರಾಜುಯೇಟ್ ಆಗದೇಹೋದರೆ ಯಾರೂ ಹೆಣ್ಣುಮಕ್ಕಳನ್ನು ಮದುವೆ ಯಾಗುವುದಿಲ್ಲ. ಅವರ ವಿದ್ಯಾಭ್ಯಾಸ ದೃಷ್ಟಿಯಿಂದ ಎಷ್ಟು ಉಪಾಧ್ಯಾಯರು ಬೇಕೋ ಅಷ್ಟು ಉಪಾಧ್ಯಾಯರನ್ನು ನೇಮಕ ಮಾಡಿಕೊಡುತ್ತೀರಾ?

ಶ್ರೀ ಜೆ.ಬಿ. ಶಂಕರರಾವ್.—ತೀವ್ರವಾಗಿ ಖಾಲಿ ಇರಬಹುದಾದಂಥ ಸ್ಥಾನಗಳಿಗೆ ಭರ್ತಿ ಮಾಡಲಿಕ್ಕೆ ಈಗಲೇ ಆದೇಶ ಕೊಡುತ್ತೇನೆ.

Kumudavathi Lift Irrigation Scheme

537 SRI SHEERNALY CHANDRASEKHAR (Hosanagar).— Will the Minister for Transport and Minor Irrigation be pleased to state.—

(a) whether Government is aware that there is a great demand from the people of Kumsi Town and the surrounding villages for Kumudavathi Lift Irrigation Scheme ;

(b) whether the Government is aware that the people of that area are prepared to remit the water tax and other expenditure tax in connection with the Lift Irrigation Scheme.

(c) when they will take up the work?

SRI M. M. J. SADYOJATHA (Minister for Transport and Minor Irrigation).—

(a) Yes.

(b) Not aware.

(c) As no yield is Left-over in Kumudavati river there is no possibility of taking up this work.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ, ನನ್ನ ಭಾಗ್ಯ ಮಾನ್ಯ ಸಚಿವರು ನನ್ನ (ಅ) ಪ್ರಶ್ನೆಗೆ ಉತ್ತರದಲ್ಲಿ ಹೌದೆಂದು ಹೇಳಿದ್ದಾರೆ ಮತ್ತು (ಆ) ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಸ್ವಾಮಿ, ಇಲ್ಲಿ ಉತ್ತರ ಕೊಡುವಾಗ ಇದನ್ನು ನಿಮ್ಮ ಸಂಬಂಧಪಟ್ಟ ಅಧಿಕಾರಿಗಳು ಏನಾದರೂ ಪರಿಶೀಲನೆ ಮಾಡಿ ಉತ್ತರ ಕೊಟ್ಟಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪರಿಶೀಲನೆ ಮಾಡಿಯೇ ಇಲ್ಲಿ ಉತ್ತರ ಕೊಡಲಾಗಿದೆ, ಪರಿಶೀಲನೆ ಮಾಡದೇ ಉತ್ತರ ಹೇಗೆ ಕೊಡುವುದಕ್ಕೆ ಸಾಧ್ಯ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನು ಮೂಲಭೂತವಾದ ಪ್ರಶ್ನೆ ಕೇಳುತ್ತಿದ್ದೇನೆ. ಅಲ್ಲಿಯ ಸಂಬಂಧಪಟ್ಟ ಶಾಸಕನಾಗಿ, ಅಲ್ಲಿಯ ಜನರ ಅಭಿಪ್ಪೆಯನ್ನು ಅರಿತವನಾಗಿಯೇ ಈ ಪ್ರಶ್ನೆಯನ್ನು ಕೇಳಿರು ವಾಗ ನಿಮ್ಮ ಅಧಿಕಾರಿಗಳು ಉತ್ತರದಲ್ಲಿ ಇಲ್ಲವೆಂದು ಕೊಟ್ಟಿದ್ದಾರಲ್ಲ ಇದು ಸತ್ಯಕ್ಕೆ ದೂರವಾದುದೆಂದು ಹೇಳಬಯಸುತ್ತಿದ್ದೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿಯೇ ಇಲ್ಲಿ ಉತ್ತರ ಕೊಡಬೇಕಾಗಿರುತ್ತದೆ. ಪರಿಶೀಲನೆ ಮಾಡದೇ ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ ಮಾನ್ಯ ಶ್ರೀ ಸದ್ಯೋಜಾತಪ್ಪನವರ ಹತ್ತಿರ ವ್ಯವಹಾರ ಮಾಡುವುದು ಬಹಳ ಕಷ್ಟ. ಸ್ವಾಮಿ. ನಾನು ಹೇಳುತ್ತಿರುವುದು ಏನೆಂದರೆ ಅಲ್ಲಿ ನೀರಿನ ತೆರಿಗೆ ಸಾಕಷ್ಟು ವಸೂಲಿಯಾಗಬೇಕಾಗಿದೆ. ಆದಕ್ಕೆ ನಾನು ಅಲ್ಲಿಯ ಜನರಿಗೆ ಅದನ್ನೆಲ್ಲಾ ವಾಪಸ್ಸು ಕೊಡುವ ಬಗ್ಗೆ ತಿಳಿಸಿದ್ದೇನೆ ಮತ್ತು ಬೇಕಾದರೆ ೫ ರೂಪಾಯಿ ಬಾಂಡ್ ಪೇಪರ್ ಮೇಲ್ಕಳಿಕೆ ಬರೆದು ಕೊಡಿ ಎಂದು ಹೇಳಿರೂ ಅಲ್ಲಿಯ ಜನ ಸಿದ್ಧರಾಗಿದ್ದಾರೆ. ಮತ್ತೆ ಈ ಯೋಜನೆಗೆ ಎಷ್ಟೇ ಖರ್ಚು ತಗಲಿದರೂ ಅವರು ಕೊಡಲು ಸಿದ್ಧರಾಗಿದ್ದಾರೆ ಇದರ ಬಗ್ಗೆ ಅಲ್ಲಿಯ ಜನ ಮತ್ತು ನಾನು ಸಹ ಎಗ್ಜಿಕ್ಯುಟಿವ್ ಇಂಜಿನಿಯರ್ ರವರಿಗೆ ಮತ್ತು ಅಸಿಸ್ಟೆಂಟ್ ಇಂಜಿನಿಯರ್‌ರವರಿಗೆ ಬರೆದು ತಿಳಿಸಿದ್ದೇವೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಬರೆದು ಕೊಟ್ಟರೂ ಸಹ ಅಲ್ಲಿಗೆ ನೀರು ಕೊಡುವುದಕ್ಕೆ ಆಗುವುದಿಲ್ಲವಲ್ಲಾ. ನೀರೇ ಇಲ್ಲವಲ್ಲಾ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ. ಇನ್ನೊಂದು ಮೂಲಭೂತವಾದಂಥ ಪ್ರಶ್ನೆ. ಈ ಶಾಸನ ಸಭೆಯಲ್ಲಿ ನಾನು ಕಳೆದ ಬಾರಿ ಕೂಡ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆ, ಆಗಲೂ ಸಹ ಈ ಯೋಜನೆಯ ಬಗ್ಗೆ ಸರ್ವೆ ಮಾಡಿಸುತ್ತೇವೆ, ಎಸ್ಟಿಮೇಟ್ ಮಾಡಿಸುತ್ತೇವೆ ಎನ್ನುತಕ್ಕ ಉತ್ತರವನ್ನು ಹಿಂದಿನ ಮಂತ್ರಿಗಳವರು ಉತ್ತರ ಕೊಟ್ಟಿದ್ದರು ಈಗ ಆಗುವುದಿಲ್ಲವೆಂದರೆ ಹೇಗೆ ಸ್ವಾಮಿ. ಬೇಕಾದರೆ ಹಿಂದಿನ ವರ್ಷದ ನಡವಳಿಕೆಗಳನ್ನು ತೆಗೆದು ನೋಡಿ.

ಅಧ್ಯಕ್ಷರು.—(ಸಿ)ಗೆ ಉತ್ತರದಲ್ಲಿ ನೋಡಿ, ಕಾಮುದವತಿ ನದಿಯಲ್ಲಿ ನೀರಿನ ಮೂಲವಿಲ್ಲದಿರುವುದರಿಂದ ಈ ಕಾಮಗಾರಿಯನ್ನು ಕೈಗೊಳ್ಳುವ ಸಾಧ್ಯತೆ ಇಲ್ಲವೆಂದು ಹೇಳಿದ್ದಾರೆ. ನೀರೇ ಇಲ್ಲವೆಂದು ಹೇಳುತ್ತಿದ್ದಾರಲ್ಲಾ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಇಪತ್ತು ನೀರು ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಕಳೆದಸಾರಿ ಒಪ್ಪಿಕೊಂಡಿದ್ದರು, ನೀರು ಇದೆ ಎಂದು ಬೆಳೆಗೆ ನೀರನ್ನು ಕೊಡಲು ಪರಿಶೀಲನೆ ಮಾಡುತ್ತೇವೆ, ಸರ್ವೆ ಮಾಡಿಸುತ್ತೇವೆ, ಎಸ್ಟಿಮೇಟ್ ಮಾಡಿಸುತ್ತೇವೆಂದು ಹೇಳಿದ್ದರು. ಈಗ ನೋಡಿದರೆ ಆ ಉತ್ತರಕ್ಕೆ ತದ್ವಿರುದ್ಧವಾಗಿ ಉತ್ತರ ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ನಮ್ಮ ಚೀಫ್ ಇಂಜಿನಿಯರ್‌ರವರನ್ನು ನನ್ನ ಛೇಂಬರ್ಸ್‌ಗೆ ಕರೆಸುತ್ತೇನೆ ನೀವು ಬನ್ನಿ ಕೂತು ನಾವು ವಿಚಾರ ವಿನಿಮಯ ಮಾಡಿ ಆನಂತರ ಮುಂದಿನ ಕ್ರಮ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡೋಣ.

ಶ್ರೀ ಶೀರ್ನಾಳಿ ಚಂದ್ರಶೇಖರ್—ವಿಚಾರ ವಿನಿಮಯ ಮಾಡುವ ಪ್ರಶ್ನೆ ಬೇರೆ ಈಗ ನೀರು ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇದ್ದರೆ ಕೊಡುತ್ತಾರೆ ಇಲ್ಲದೇ ಹೋದರೆ ಅವರೇನು ಮಾಡುತ್ತಾರೆ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ಅಲ್ಲ ಸ್ವಾಮಿ, ಅವರು ನೀರನ್ನು ಅಲ್ಲಿಗೆ ಒದಗಿಸುವುದಕ್ಕೆ ಆಗುತ್ತದೆ ಇಲ್ಲವೆ ಏನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಲಿ ಎಂದು ಕೇಳುತ್ತಿದ್ದೇನೆ.

SRI M.M.J. SADYOJATHA.—I will re-examine the matter.

SRI S.M. SHEERNALY CHANDRASEKHAR.—Thank you very much.

Scarcity Conditions in Hassan District

773 SRI K.H. HANUME GOWDA (Hassan).—Will the Minister of State for Major and Medium Irrigation be pleased to state.—

(a) whether it has come to the notice of Government that the Hassan, Arasikere and Belur Taluks of Hassan District are affected very year often by drought,